**ಕರ್ನಾಟಕ ಸರ್ಕಾರ**
**ಕರ್ನಾಟಕ ಅರಣ್ಯ ಇಲಾಖೆ**

# ನಾಗರಿಕರ ಸನ್ನದು

## ಗೊತ್ತುಗುರಿಯ ಹೇಳಿಕೆ

- ಅರಣ್ಯಗಳ ರಕ್ಷಣೆ, ಸಂರಕ್ಷಣೆ ಮತ್ತು ಸುಸ್ಥಿರ ಸಂವರ್ಧನೆಯನ್ನು ಉತ್ತೇಜಿಸುವುದು, ವನ್ಯಜೀವಿ ಸಂರಕ್ಷಣೆ ಮತ್ತು ಮಣ್ಣು ಮತ್ತು ಜಲ ಸಂರಕ್ಷಣೆಯ ಬಗ್ಗೆ ಕೃಷಿ ಭೂಮಿಯಲ್ಲಿ ವೃಕ್ಷಾಧಾರಿತ ಕೃಷಿಯನ್ನು ಉತ್ತೇಜಿಸುವುದು.

## ದೂರದೃಷ್ಟಿಯ ಹೇಳಿಕೆ

- ರಾಜ್ಯದ ಅರಣ್ಯ ಪ್ರದೇಶವನ್ನು ರಕ್ಷಿಸುವಂತೆ ಸಂರಕ್ಷಿಸುವಂತೆ ಮತ್ತು ವೃದ್ಧಿಗೊಳಿಸುವಂತೆ ನೋಡಿಕೊಳ್ಳುವುದು.
- ಜನತೆಯ "ಜೈವಿಕ ರಾಶಿ ಅವಶ್ಯಕತೆ"ಗಳನ್ನು ಸುಸ್ಥಿರ ಆಧಾರದಲ್ಲೂ ಪೂರೈಸುವಂತೆ ನೋಡಿಕೊಳ್ಳುವುದು.
- ಸಂರಕ್ಷಣೆಯು "ಒಂದು ಜೀವನ ವಿಧಾನ"ವಾಗಿ ಪರವರ್ತನೆಯಾಗುವಂತೆ ನೋಡಿಕೊಳ್ಳುವುದು.

ರಾಜ್ಯ ಸರ್ಕಾರದ ಆಡಳಿತಾತ್ಮಕ ಅಂಗರಚನೆಯಲ್ಲಿ ಕಾರ್ನಾಟಕ ಅರಣ್ಯ ಇಲಾಖೆಯು ಅರಣ್ಯೀಕರಣ ಯೋಜನೆಗಳನ್ನು ಯೋಜಿಸುವುದು, ಉತ್ತೇಜಿಸುವುದು, ಸಮನ್ವಯಗೊಳಿಸುವ ಮತ್ತು ಅನುಷ್ಠಾನದ ಮೇಲುಸ್ತುವಾರಿ ಮಾಡುವ ಏಜೆನ್ಸಿಯಾಗಿರುತ್ತದೆ.

## ನಮ್ಮ ಧ್ಯೇಯ ಮತ್ತು ಉದ್ದೇಶಗಳು

1) ಅರಣ್ಯ ಮತ್ತು ವನ್ಯಜೀವಿಯ ಮತ್ತು ಅದರಲ್ಲಿಯ ಜೈವಿಕ ವೈವಿಧ್ಯತೆಯನ್ನು ಸಂರಕ್ಷಿಸುವುದು.
2) ಮಾಲಿನ್ಯಕ್ಕೆ ಕಾರಣವಾಗುವ ಅಂಶಗಳನ್ನು ಉಪಶಮನಗೊಳಿಸುವುದು.
3) ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ಪುನರುಜ್ಜೀವನ ಮತ್ತು ಅರಣ್ಯೀಕರಣಗೊಳಿಸುವುದು.
4) ಪರಿಸರವನ್ನು ಸಂರಕ್ಷಿಸುವುದು ಮತ್ತು ಸುಸ್ಥಿರವಾಗಿ ಅಭಿವೃದ್ಧಿಗೊಳಿಸುವುದು.
5) ಪ್ರಾಕೃತಿಕ ಸಂಪನ್ಮೂಲಗಳನ್ನು ಮತ್ತು ವನ್ಯಜೀವಿಯೂ ಸೇರಿದಂತೆ ಅರಣ್ಯಗಳನ್ನು ವೈಜ್ಞಾನಿಕ ತತ್ವದಲ್ಲಿ ನಿರ್ವಹಿಸುವುದು.
6) ನೀರಾವರಿ ಪ್ರದೇಶದ ಜೀವ ಪರಿಸರವನ್ನು ಕಾಪಾಡುವುದು ಮತ್ತು ಸಂರಕ್ಷಿಸುವುದು.
7) ಪ್ರಾಕೃತಿಕ ಅರಣ್ಯದ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸುವುದು.
8) ಕೃಷಿ ಅರಣ್ಯ ಮತ್ತು ವಿಸ್ತರಣ ಅರಣ್ಯವನ್ನು ಉತ್ತೇಜಿಸುವುದು.

9) ಯೋಜನೆ ಮತ್ತು ಅನುಷ್ಠಾನದಲ್ಲಿ ಜನತೆಯನ್ನು ಒಳಗೊಳಿಸುವುದು.
10) ಜನತೆಯ ಸಹಭಾಗಿತ್ವಕ್ಕೆ ಸಾಂಸ್ಥಿಕ ಸ್ವರೂಪ ನೀಡುವುದು.
11) ಅರಣ್ಯ ಅವಲಂಬಿತ ಸಮುದಾಯದ ಜೈವಿಕ ರಾಶಿಯ ಅವಶ್ಯಕತೆಯನ್ನು ಪೂರೈಸುವುದು.
12) ಸಂರಕ್ಷಣೆ, ಶಿಕ್ಷಣ ಮತ್ತು ತಿಳುವಳಿಕೆಯನ್ನು ಉತ್ತೇಜಿಸುವುದು.
13) ಜನತೆಯಲ್ಲಿ ಅರಣ್ಯ ಪ್ರವಾಸವನ್ನು ಉತ್ತೇಜಿಸುವುದು.
14) ಅರಣ್ಯ ಮತ್ತು ವನ್ಯಜೀವಿ ನಿರ್ವಹಣೆಯ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ತರಬೇತಿಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸುವುದು.

## ನಾವು ನೆರವೇರಿಸುವ ಧ್ಯೇಯೋದ್ಧೇಶಗಳು

1) ಅನುಮೋದಿತ ಕಾರ್ಯ ಮತ್ತು ನಿರ್ವಹಣಾ ಯೋಜನೆಯ ಆಧಾರದಲ್ಲೂ ಅರಣ್ಯ ಮತ್ತು ವನ್ಯಜೀವಿ ನಿರ್ವಹಣೆ.
2) ಅರಣ್ಯವನ್ನು ಅಕ್ರಮ ಕಡಿತಲೆ, ಬೆಂಕಿ ಮತ್ತು ಅತಿಕ್ರಮಣದಿಂದ ರಕ್ಷಿಸುವುದು.
3) ಕಾಯಿದೆ ಕಟ್ಟಳೆಗಳ ಅನುಸಾರ ವನ್ಯಜೀವಿ ಸಂರಕ್ಷಣೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
4) ತಲಸ್ಥಾಯಿ ಸಂಸ್ಥೆಗಳನ್ನು (ಗ್ರಾಮ ಅರಣ್ಯ ಸಮಿತಿ/ಪರಿಸರ ಅಭಿವೃದ್ಧಿ ಸಮಿತಿ) ರಚಿಸುವ ಮೂಲಕ ಅರಣ್ಯ ರಕ್ಷಣೆಯ ವಿಷಯದಲ್ಲಿ ಜನತೆಯ ಸಹಭಾಗಿತ್ವವನ್ನು ದೃಢಪಡಿಸುವುದು.
5) ಮಾನವ-ಪ್ರಾಣಿ ಸಂಘರ್ಷವನ್ನು ಉಪಶಮನಗೊಳಿಸುವ ಬಗ್ಗೆ ನಿದೇಶನ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುವುದು.
6) ಅರಣ್ಯ ಅವಲಂಬಿತ ಸಮುದಾಯ, ಕೃಷಿಕರು ಮತ್ತು ಕುಶಲಕರ್ಮಿಗಳ ಜೈವಿಕ ರಾಶಿಯ ಅವಶ್ಯಕತೆಗಳನ್ನು ಸಾಮಾಜಿಕ ಅರಣ್ಯ, ಕೃಷಿ ಅರಣ್ಯ ಮತ್ತು ವಿಸ್ತರಣ ಅರಣ್ಯವನ್ನು ಪ್ರೋತ್ಸಾಹಿಸುವ ಮೂಲಕ ಪೂರೈಸುವುದು.
7) ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ, ವನ್ಯಜೀವಿ ಉತ್ಸಾಹಿಗಳಿಗೆ ಪ್ರಕೃತಿ ಶಿಬಿರ, ಪ್ರಕೃತಿ ಪ್ರವಾಸ, ಸಂಚಲನಗಳನ್ನು ಏರ್ಪಡಿಸುವುದು.
8) ಪ್ರಚಾರ ಸಾಮಗ್ರಿಗಳನ್ನು ಅಂದರೆ ಕಿರುಹೊತ್ತಿಗೆ, ಕರಪತ್ರ ಮತ್ತು ನಿಯತಕಾಲಿಕ ಇತ್ಯಾದಿಗಳನ್ನು ತಯಾರಿಸುವುದು.
9) ಜನತೆಗೆ, ಸಿಬ್ಬಂದಿಗೆ ಮತ್ತು ಅಧಿಕಾರಿಗಳಿಗೆ ಅವಕಾಶಗಳನ್ನು ಮಾಡಿಕೊಡುವುದು ಮತ್ತು ಪ್ರೋತ್ಸಾಹವನ್ನು ನೀಡುವುದು.
10) ವೈಜ್ಞಾನಿಕ ವಿಧಾನದಲ್ಲಿ ಪರಿಸರ ಪುನರುತ್ಪತ್ತಿ.
11) ಪರಿಸರ ಮತ್ತು ಅರಣ್ಯ ಸಂಶೋಧನೆ, ವಿಸ್ತರಣೆ, ಶಿಕ್ಷಣ ಮತ್ತು ತರಬೇತಿಯನ್ನು ಉತ್ತೇಜಿಸುವುದು.
12) ದೇಶದ ಎಲ್ಲಾ ವರ್ಗದ ಜನತೆಯಲ್ಲಿ ಪರಿಸರ ಸಂಬಂಧಿ ಮಾಹಿತಿಗಳನ್ನು ಪ್ರಚಾರಗೊಳಿಸುವುದು.
13) ಕ್ಷೀಣಿತ ಪ್ರದೇಶವನ್ನು ಪನರುಜ್ಜೀವನಗೊಳಿಸುವುದು ಮತ್ತು ಅರಣ್ಯೀಕರಣಗೊಳಿಸುವುದು.
14) ನೀರಾವರಿ ಪ್ರದೇಶದ ಪರಿಸರ ವ್ಯವಸ್ಥೆಯನ್ನು ರಕ್ಷಿಸುವುದು ಮತ್ತು ಅಭಿವೃದ್ಧಿಗೊಳಿಸುವುದು.

**ಇಲಾಖೆಯು ನಿರ್ವಹಿಸುವ ವ್ಯವಹಾರಗಳು**

**ನಮ್ಮ ಪ್ರಯತ್ನವು:**

1. **ಈ ಕೆಳಗಿನ ಕ್ರಮಗಳ ಮೂಲಕ ಅರಣ್ಯ ಮತ್ತು ವನ್ಯಜೀವಿಗಳ ರಕ್ಷಣೆ ಮತ್ತು ಸಂರಕ್ಷಣೆ.**

1) ಅರಣ್ಯ ರಕ್ಷಣೆ ಮತ್ತು ನಿರ್ವಹಣೆ.
2) ಕರ್ನಾಟಕ ಅರಣ್ಯ ಅಧಿನಿಯಮ 1963 ಮತ್ತು ಕರ್ನಾಟಕ ಅರಣ್ಯ ನಿಯಮಾವಳಿ 1969ರ ಅನುಷ್ಠಾನ.
3) ವಿವಿಧ ಯೋಜನೆ, ಯೋಜನೇತರ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವುದು.
4) ರಕ್ಷಿತ ಪ್ರದೇಶ ಸಂಕೀರ್ಣವನ್ನು ನಿರ್ವಹಣೆ ಮಾಡುವುದು ಮತ್ತು ಪರಿಸರ ಅಭಿವೃದ್ಧಿ,
5) ವನ್ಯಜೀವಿ (ರಕ್ಷಣೆ) ಅಧಿನಿಯಮ 1972ರ ಅನುಷ್ಠಾನ.
6) ಅರಣ್ಯ ಸಂಪನ್ಮೂಲಗಳ ಸಂಗ್ರಹಣೆ ಮತ್ತು ವಿಲೆ.
7) ಪ್ರಚಾರ ಮತ್ತು ಪ್ರೋತ್ಸಾಹ.
8) ಕರ್ನಾಟಕ ವೃಕ್ಷ ಸಂರಕ್ಷಣಾ ಅಧಿನಿಯಮ 1976ರ ಅನುಷ್ಠಾನ.
9) ಇಲಾಖೆಯ ಧ್ಯೇಯೋದ್ದೇಶಗಳ ಸಾಧನೆಗಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ, ಮಾನವ ಶಕ್ತಿ ಅಭಿವೃದ್ಧಿ.
10) ರಕ್ಷಿತ ಪ್ರದೇಶ ಸಂಕೀರ್ಣವನ್ನು ನಿರ್ಮಿಸುವ ಮೂಲಕ ವನ್ಯಜೀವಿ ಸಂರಕ್ಷಣೆ.
11) ಸಾಮಾಜಿಕ ಅರಣ್ಯ ಮತ್ತು ಇತರ ಅರಣ್ಯಾಭಿವೃದ್ಧಿ ಚಟುವಟಿಕೆಗಳು ಸೇರಿದಂತೆ ಅರಣ್ಯೀಕರಣವನ್ನು ಉತ್ತೇಜಿಸುವುದು.
12) ಸಂಪನ್ಮೂಲಗಳ ವಿವೇಚನಾಯುತ ಬಳಕೆಯ ಮೂಲಕ ಇನ್ನಷ್ಟು ಅರಣ್ಯ ನಾಶವನ್ನು ತಡೆಗಟ್ಟುವುದು.
13) ಅರಣ್ಯ ಪ್ರದೇಶ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಸುಸ್ಥಿರ ಉತ್ಪತ್ತಿಯನ್ನು ವೃದ್ಧಿಸುವ ಬಗ್ಗೆ ಅವುಗಳ ಪುನರುಜ್ಜೀವನ.
14) ಅರಣ್ಯ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಮತ್ತು ಅವುಗಳ ಸುಸ್ಥಿರ ನಿರ್ವಹಣೆಯ ಬಗ್ಗೆ ಅರಣ್ಯ ಸಂಶೋಧನೆಯನ್ನು ತೀವ್ರಗೊಳಿಸುವುದು.
15) ಜಂಟಿ ಅರಣ್ಯ ನಿರ್ವಹಣೆಯ ಮೂಲಕ ಜನತೆಯ ಅದರಲ್ಲಿಯೂ ಮುಖ್ಯವಾಗಿ ಸ್ತ್ರೀಯರ ಸಹಭಾಗಿತ್ವವನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವುದು.
16) ಜಂಟಿ ಅರಣ್ಯ ನಿರ್ವಹಣೆಯ ಗೊತ್ತುವಳಿಯನ್ನು ಅಂಗೀಕರಿಸಿದ ಎಲ್ಲಾ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಆಯ್ದ ಪ್ರಾದೇಶಿಕ/ವನ್ಯಜೀವಿ ವಿಭಾಗಗಳ ಅರಣ್ಯ-ಅಂಚಿನ ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಅರಣ್ಯ ಅಭಿವೃದ್ಧಿ ಏಜೆನ್ಸಿ ಎನ್ನುವ ಪರಿಕಲ್ಪನೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

## 2. ಪರಿಸರ ಮತ್ತು ಜೀವ ಪರಿಸ್ಥಿತಿ:

1) ಶಾಸನಾತ್ಮಕ ಉಪಕ್ರಮಗಳೂ ಸೇರಿದಂತೆ ಪರಿಸರ ರಕ್ಷಣೆ ಮತ್ತು ಸಂರಕ್ಷಣೆಗಳ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವುದು.
2) ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಕ್ಷೇತ್ರಸರ್ವೆ, ಅಧ್ಯಯನಗಳೂ ಒಳಗೊಂಡಂತೆ ಇತರ ಕಾರ್ಯಕ್ರಮಗಳ ಮೂಲಕ ಪರಿಸರ ರಕ್ಷಣೆ ಮತ್ತು ಸಂರಕ್ಷಣೆಯನ್ನು ಪ್ರೋತ್ಸಾಹಿಸುವುದು.
3) ಜೀವನಾಧಾರ ಮತ್ತು ಉತ್ಪಾದನಾ ಸಾಮರ್ಥ್ಯವನ್ನು ರಕ್ಷಿಸುವ ಸಲುವಾಗಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ.
4) ಜಲ ಮತ್ತು ಮಣ್ಣು ಸಂರಕ್ಷಣೆಯ ಚಾಲ್ತಿಯಲ್ಲಿನ ಕಾರ್ಯಕ್ರಮಗಳನ್ನು ಮುಂದುವರಿಸುವುದು.

## ಸೇವೆಗಳನ್ನು ಒದಗಿಸುವ ಹೇಳಿಕೆ

## I. ನಮ್ಮ ಸೇವೆಯು ಈ ಕೆಳಗಿನವುಗಳನ್ನು ಬೆಂಬಲಿಸುತ್ತದೆ

1) ಜೈವಿಕ ವೈವಿಧ್ಯತೆಯ ವೈಜ್ಞಾನಿಕ ನಿರ್ವಹಣೆ ಮತ್ತು ಸಂರಕ್ಷಣೆ.
2) ಪರಿಸರ ನೈಸರ್ಗಿಕ ಸಂಸ್ಕರಣಕ್ಕೆ ಅವಕಾಶ ನೀಡುವ ರೀತಿಯಲ್ಲಿ ಅರಣ್ಯ ಸಂರಕ್ಷಣೆ.
3) ಬಡಜನತೆಗೆ ಜೀವನಾಧಾರ ಬೆಂಬಲವನ್ನು ಒದಗಿಸುವುದು.
4) ಪುನರುತ್ಪತ್ತಿಗಾಗಿ ಭೌಗೋಳಿಕ ಅಂಗರಚನೆಯ ವೈಶಿಷ್ಟ್ಯಗಳಿಗೆ ಅನುಸಾರವಾಗಿ ರಕ್ಷಣೆ ಮತ್ತು ಅಭಿವೃದ್ಧಿ.
5) ಜನತೆಗೆ ಮೋಪು, ಉರುವಲು ಮತ್ತು ಮೇವನ್ನು ಒದಗಿಸುವುದು.
6) ಕುಶಲಕಲೆಗೆ ಉತ್ತೇಜಿಸುವ ಬಗ್ಗೆ ಕುಶಲಕರ್ಮಿಗಳಿಗೆ ಕಚ್ಚಾ ಸಾಮಗ್ರಿಯನ್ನು ಒದಗಿಸುವುದು.
7) ಅರಣ್ಯಕ್ಕೆ ಸಂಬಂಧಿಸಿದ ವೈಜ್ಞಾನಿಕ ಮಾಹಿತಿಯನ್ನು ಪ್ರಚಾರ ಪಡಿಸುವ ಬಗ್ಗೆ ಸಮನ್ವಯ ಏಜೆನ್ಸಿಯಾಗಿ ಕ್ರಮತೆಗೆದುಕೊಳ್ಳುವುದು.
8) ಅರಣ್ಯ ಮತ್ತು ವನ್ಯಜೀವಿ ವಿಷಯಗಳ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ವೈಜ್ಞಾನಿಕ ಸಮುದಾಯಕ್ಕೆ ಪ್ರೋತ್ಸಾಹ.
9) ಪರಿಸರ ಸಮಸ್ಯೆಗಳಿಗೆ ಸಮರ್ಪಕ ಪರಿಹಾರವನ್ನು ಕಂಡುಕೊಳ್ಳುವ ಬಗ್ಗೆ ಪ್ರಯತ್ನಿಸುವ ಮತ್ತು ನೈಸರ್ಗಿಕ ಪರಿಸರ ಸಂಪನ್ಮೂಲಗಳ ಪುನರುಜ್ಜೀವನದ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.
10) ಬಡತನ ರೇಖೆಗಿಂತ ಕೆಳಗಿರುವ ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
11) ಸ್ವಯಂ ಸೇವಾ ಸಂಸ್ಥೆಗಳು, ಎನ.ಜಿ.ಓ.ಗಳು ವಿಶ್ವವಿದ್ಯಾಲಯಗಳು ಮತ್ತು ಪರಿಸರ ಕುರಿತು ಸಂಶೋಧನೆ ಮಾಡುವ ಸಂಶೋಧನಾ ಸಂಸ್ಥೆಗಳು, ಜೈವಿಕ ಅಭಿವೃದ್ಧಿ, ಸಂರಕ್ಷಣೆ, ಪರಿಸರ ಶಿಕ್ಷಣ ಮತ್ತು ಜಾಗೃತಿ, ಪರಿಸರ ಮಾಹಿತಿಯ ಪ್ರಚಾರ.
12) ಪರಿಸರ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಪರಿಸರ ಕ್ಷೀಣಿತಗೊಳ್ಳುತ್ತಿರುವುದರಿಂದ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ಉಪಶಮನ ಮಾಡುವ ತಂತ್ರಜ್ಞಾನ.

13) ನೆಡುತೋಪು ಬೆಳೆಸುವುದು, ಮಣ್ಣು ಸಂರಕ್ಷಣೆ, ಭೂಮಿ ಸದ್ಭಳಕೆ ಯೋಜನೆಗಳು, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ, ವಾಯು, ಜಲ ಮತ್ತು ಮಣ್ಣು ಮಾಲಿನ್ಯಗಳನ್ನು ನಿಯಂತ್ರಿಸುವುದು, ಕ್ಷೀಣಿತ ಜೈವಿಕ ಪದ್ದತಿಯ ಪುನರುತ್ಥಾನ, ರಾಜ್ಯದ ತೀವ್ರ ಪರಿಸರ ಮಾಲಿನ್ಯ ಉಂಟಾಗಿರುವ ಪ್ರದೇಶಲ್ಲಿ ನಗರ ಹಸರೀಕರಣ ಹಾಗೂ ಕೆರೆ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಪರಿಸರ ಮಾಲಿನ್ಯ ನಿಯಂತ್ರಿಸುವ ಕ್ರಿಯಾ ಯೋಜನೆಗಳು.

14) ಅಗತ್ಯವಿರುವ ಮಾನವ ಶಕ್ತಿಯ ವೃದ್ದಿ, ಸಂರಕ್ಷಣೆ, ಪರಿಸರ ಮಾಹಿತಿಯ ಸಂಗ್ರಹಣೆ ಮತ್ತು ಪ್ರಚಾರ, ರಾಜ್ಯ ಮಟ್ಟದಲ್ಲಿ ಪರಿಸರ ಜಾಗೃತಿ ಸೃಷ್ಟಿಸುವುದು.

15) ಇಲಾಖಾ ಸಿಬ್ಬಂದಿಯವರಿಗೆ ಆಂತರೀಕ ತರಬೇತಿ ನೀಡುವುದು.

16) ಆಡಳಿತದಲ್ಲಿ ಪಾರದರ್ಶಕತೆ.

## II. ಸನ್ನದಿನ ವಾರ್ಷಿಕ ಪರಿಶೀಲನೆಗೆ ಅವಕಾಶ

1) ಇಲಾಖೆ ಈ ಸನ್ನದಿನ ಅಡಿಯಲ್ಲಿ ನೀಡುತ್ತಿರುವ ಸೇವೆಯ ವಾರ್ಷಿಕ ಪರಿಶೀಲನೆ ಮಾಡಲಾಗುವುದು.

2) ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಿಸುವ ವಿಷಯವನ್ನು ಸಾರ್ವಜನಿಕ ದೂರು ಅಧಿಕಾರಿಯಿಂದ ನಿಗಾವಹಿಸಲ್ಪಡುತ್ತದೆ. (ಪರಿಶೀಲಿಸುವುದು)

3) ಇಲಾಖೆಯಲ್ಲಿ ಸ್ವೀಕರಿಸಲ್ಪಟ್ಟ ದೂರುಗಳು ಮತ್ತು ಅವುಗಳ ಪ್ರಗತಿಯನ್ನು ಸಾರ್ವಜನಿಕ ದೂರು ನಿವಾರಣಾ ಘಟಕದಿಂದ ವಾರ್ಷಿಕ ಪರಿಶೀಲನೆ.

4) ಸಾರ್ವಜನಿಕ ದೂರುಗಳನ್ನು ಶೀಘ್ರವಾಗಿ ವಿಲೇ ಮಾಡಲು ತೆಗೆದುಕೊಂಡಿರುವ ಪರಿಹಾರ ಕ್ರಮಗಳು, ಅದರಲ್ಲೂ ಮುಖ್ಯವಾಗಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಪುನರಪಿ ಸ್ವೀಕರಿಸುವ ಅರ್ಜಿಗಳನ್ನು ವಿಲೇ ಮಾಡುವ ಬಗ್ಗೆ.

## III. ದೂರುಗಳ ನಿವಾರಣಾ ತಾಂತ್ರಿಕತೆಗೆ ಸಂಬಂಧಿಸಿದಂತೆ ವಿವರಗಳು

1) ಪರಿಸರಕ್ಕೆ ಸಂಬಂಧಿಸಿದ, ಹಾಗೆಯೇ ಅರಣ್ಯ ಮತ್ತು ವನ್ಯಜೀವಿಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಕ್ರಮತೆಗೆದುಕೊಳ್ಳಲು ಒಂದು ದೂರು ನಿವಾರಣಾ ಘಟಕವನ್ನು ಸ್ಥಾಪಿಸಲಾಗಿದೆ. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಇವರನ್ನು ಇಲಾಖೆಯ ಸಾರ್ವಜನಿಕ ಕುಂದುಕೊರತೆ ಅಧಿಕಾರಿಯಾಗಿ ನೇಮಿಸಲಾಗಿದೆ.

2) ಸಾರ್ವಜನಿಕ ಕುಂದುಕೊರತೆ ಅಧಿಕಾರಿ ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೆಲೆಯು ಹಾಗೂ ಅವರಿಗಿಂತ ಮೇಲ್ಪಟ್ಟ ಅಧಿಕಾರಿಗಳು ವಾರದ ಪ್ರತಿ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಲು ಮತ್ತು ಆಲಿಸಲು ಕಚೇರಿಯಲ್ಲಿ ಲಭ್ಯವಿರುತ್ತಾರೆ.

3) ಕಚೇರಿಗೆ ಭೇಟಿ ನೀಡುವವರನ್ನು ಸೌಜನ್ಯತೆಯಿಂದ ಕಂಡು, ಅವರ ಅವಹಾಲುಗಳಿಗೆ ಪರಿಹಾರ ಸೂಚಿಸಲು ಅನುಕೂಲವಾಗುವಂತೆ ಸಮಾಧಾನದಿಂದ ಕೇಳಿಸಿಕೊಳ್ಳಲಾಗುವುದು.

4) ಒಂದು ವೇಳೆ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಸಿಗದಿದ್ದಲ್ಲಿ, ಅವರು ಈ ಕೆಳಕಂಡ ಅಧಿಕಾರಿಯನ್ನು ಸಂಪರ್ಕಿಸಬಹುದು :–

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಸಂಪರ್ಕ ಮತ್ತು ಮಾಹಿತಿ)**
4ನೇ ಮಹಡಿ, ಅರಣ್ಯ ಭವನ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ
ಬೆಂಗಳೂರು – 560 003
ದೂರವಾಣಿ 23347086
ಇ–ಮೇಲ್: g-selvakumar_ifs@karnataka.gov.in
or
ccf_ci@yahoo.co.in

**ಫಿರ್ಯಾದುದಾರರಿಂದ / ನಾಗರೀಕರಿಂದ ನಿರೀಕ್ಷೆ**

1. **ನಾವು ಎಲ್ಲಾ ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಗಳಿಂದ ಅಥವಾ ಎಲ್ಲಾ ನಾಗರೀಕರಿಂದ ಈ ಕೆಳಕಂಡ ಅಂಶಗಳನ್ನು ನಿರೀಕ್ಷಿಸುತ್ತೇವೆ**.

1) ಪರಿಸರ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಎಂಬ ಸಾಮಾನ್ಯ ಉದ್ದೇಶಕ್ಕಾಗಿ ಇಲಾಖೆಯೊಂದಿಗೆ ಸಂಪರ್ಕ.
2) ಸ್ವಾಭಾವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಪ್ರಕೃತಿ ನಿಯಮಗಳಿಗೆ ಗೌರವ ತೋರಿಸುವ ಸ್ಫೂರ್ತಿಯನ್ನು ಅಂತರ್ಗತ ಮಾಡಿಕೊಳ್ಳುವುದು.
3) ಪರಿಸರ ಸಂರಕ್ಷಣೆ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರವು ರಚಿಸಿರುವ ನೀತಿ ಮತ್ತು ನಿಬಂಧನೆಗಳನ್ನು ಗೌರವಿಸುವುದು ಹಾಗೂ ಅವುಗಳಿಗೆ ಬದ್ಧವಾಗಿರುವುದು.
4) ಸಹ ನಾಗರೀಕರೊಂದಿಗೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದರ ಮೂಲಕ ಅರಣ್ಯಗಳ ಮತ್ತು ವನ್ಯಜೀವಿಗಳ ಅಭಿವೃದ್ಧಿಗೆ ಪ್ರೋತ್ಸಾಹಿಸುವುದು.
5) ಪ್ರಸ್ತುತ ಅನುಸರಿಸುತ್ತಿರುವ ಕಾರ್ಯವಿಧಾನವನ್ನು ಸರಿಪಡಿಸಲು ಹಾಗೂ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಉತ್ತಮಪಡಿಸಲು ಸಲಹೆಗಳನ್ನು ಸ್ವೀಕರಿಸಲಾಗುವುದು.
6) 'ಪರಿಸರ ನೀತಿ' ಪಾಲನಾ ಕ್ರಮವನ್ನು ಅಳವಡಿಸಿಕೊಳ್ಳುವುದು.

**¸À/-**
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**